# ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು

**ಸಂಖ್ಯೆ:ಪಿಎಸ್ ಸಿ 11 ಆರ್ ಟಿ(4) ಬಿ-1/2020/** **ದಿನಾಂಕ:11-08-2023**

**ಅಧಿಸೂಚನೆ**

**ಅಂತಿಮ ಆಯ್ಕೆಪಟ್ಟಿ**

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 01 ಆರ್ ಟಿ(4)ಬಿ-1/2020, ದಿನಾಂಕ:31-07-2020ರಲ್ಲಿ ಅಧಿಸೂಚಿಸಲಾದ ಗ್ರೂಪ್ 'ಸಿ' ತಾಂತ್ರಿಕೇತರ ವೃಂದದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಲ್ಲಿನ ವಿದ್ಯಾರ್ಥಿ ನಿಲಯ ಮೇಲ್ವಿಚಾರಕರು (ವಾರ್ಡನ್) 03 (ಹೈ.ಕ) ಹುದ್ದೆಗಳಿಗೆ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ಹಾಗೂ ತಿದ್ದುಪಡಿ ನಿಯಮಗಳನ್ವಯ ದಿನಾಂಕ:05-05-2023ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಸದರಿ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು 07 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು. ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಆಯ್ಕೆಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ.

| | | |
|---|---|---|
| **ಹುದ್ದೆ** | : | ವಿದ್ಯಾರ್ಥಿ ನಿಲಯ ಮೇಲ್ವಿಚಾರಕರು (ವಾರ್ಡನ್) |
| **ನೇಮಕಾತಿ ಪ್ರಾಧಿಕಾರ** | : | **ನಿರ್ದೇಶಕರು** |
| **ಇಲಾಖೆ** | : | ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ |

**HYDERABAD KARNATAKA**

| SL.NO. | NAME OF THE CANDIDATE | REGNO. | D_O_B | RESVN. / QUALIFICATION | TOTMK | PERS. | |
|---|---|---|---|---|---|---|---|
| 1 | SARASWATI<br>W/O BHEEMARAYA SAMAGAR AT POST<br>UDACHAN TALUKA AFZALPUR DIST KALABURAGI<br>UDACHAN,AFZALPUR<br>GULBARGA<br>585217 | 2013826 | 20/06/82 | GM/SC/W<br>Bachelor of Arts(B.A.)<br>Bachelor of Education(B.Ed.) | 157.5000 | 78.7500 | |
| 2 | MARUTI<br>MARUTI S/O ANTAPPA AT GADADANNA POST<br>MOTAKAPALLI TQ SEDAM DIST GULBARGA<br>GADADANNA,SEDAM<br>GULBARGA<br>585318 | 2013957 | 20/07/93 | ST/RL<br>Bachelor of Science(B.Sc.)<br>Bachelor of Education(B.Ed.) | 100.2500 | 50.1250 | * |

| SL.NO. | NAME OF THE CANDIDATE | REGNO. | D_O_B | RESVN. QUALIFICATION | TOTMK | PERS. | |
|---|---|---|---|---|---|---|---|
| 3 | AMBIKA<br>C/O SHANKAR  H NO E/379 RING ROAD<br>NIZMAPUR NEAR HANUMAN TEMPLE<br>GULBARGA<br>585104 | 2024927 | 30/10/86 | 2A/W<br>Bachelor of Arts(B.A.)<br>Bachelor of Education(B.Ed.) | 90.0000 | 45.0000 | * |

**ಸೂಚನೆಗಳು : -**

1. ಸದರಿ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ನಿಯಮಾನುಸಾರ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಶೇಕಡವಾರು ಅಂಕಗಳ ಜೇಷ್ಠತೆ, ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವಾಗ ಒಂದಕ್ಕಿಂತ ಹೆಚ್ಚು ಹುದ್ದೆಗಳ ಆಯ್ಕೆಗೆ ಅರ್ಹರಾಗುವ Common Candidate ಕಂಡು ಬಂದಿರುವ ಹಿನ್ನೆಲೆಯಲ್ಲಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ Common Candidate ಗಳನ್ನು ತೆಗೆದು ಹಾಕಲು ಅಂತಹ ಅಭ್ಯರ್ಥಿಗಳಿಂದ ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಪಡೆದ ಆದ್ಯತೆ ಹಾಗೂ ಸ್ವ-ಇಚ್ಛಾ ಹೇಳಿಕೆ ಪರಿಗಣಿಸಿದೆ. ಒಂದು ವೇಳೆ ಅಭ್ಯರ್ಥಿಯು ಆದ್ಯತೆಗಳನ್ನು ನೀಡದೇ ಇದ್ದಲ್ಲಿ ಅಥವಾ ನೀಡಲಾದ ಆದ್ಯತೆಗಳು ಅಸ್ಪಷ್ಟವಾಗಿದ್ದಲ್ಲಿ ಅಂತಹ ಸಮಯದಲ್ಲಿ ಅಭ್ಯರ್ಥಿಯು ಆನ್ ಲೈನ್ ಅರ್ಜಿಯಲ್ಲಿ ನೀಡಲಾದ ಆದ್ಯತೆಗಳನ್ನು ಪರಿಗಣಿಸಿದೆ. ಈ ರೀತಿ ಕಂಡು ಬಂದ Common Candidate ಗಳಿಗೆ ಅಭ್ಯರ್ಥಿಯು ಗಳಿಸಿರುವ ಅಂಕಗಳು, ಮೀಸಲಾತಿ ಹಾಗೂ ನೀಡಲಾದ ಆದ್ಯತೆಗೆ ಅನುಗುಣವಾಗಿ ಅವರನ್ನು ಒಂದು ಹುದ್ದೆಗೆ ಮಾತ್ರ ಪರಿಗಣಿಸಿ ಉಳಿದ ಹುದ್ದೆಗಳನ್ನು ಸ್ವ-ಇಚ್ಛಾ ಹೇಳಿಕೆಯಂತೆ Not Willing ಎಂದು ಪರಿಗಣಿಸಿ ಈ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ.

2. ಈ ಆಯ್ಕೆಪಟ್ಟಿಯಲ್ಲಿ * ಗುರುತಿಸಲಾದ ಅಭ್ಯರ್ಥಿಗಳನ್ನು ಈ ಕೆಳಕಂಡ ಷರತ್ತಿಗೆ ಒಳಪಟ್ಟಂತೆ ಪರಿಗಣಿಸಲಾಗಿರುತ್ತದೆ.

   **"ಒಂದು ವೇಳೆ ಯಾವುದಾದರೂ ಕಾರಣಕ್ಕಾಗಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಆಯ್ಕೆಯಾಗಿ ಸ್ವ-ಇಚ್ಛಾ ಹೇಳಿಕೆ ನೀಡಿ ಸದರಿ ಹುದ್ದೆಯನ್ನು ಬಿಟ್ಟುಕೊಟ್ಟಿರುವ ಅಭ್ಯರ್ಥಿಗಳು ಈಗ ಆಯ್ಕೆಯಾಗಿರುವ ಹುದ್ದೆಯಲ್ಲಿನ ಆಯ್ಕೆಯು ಅಸಿಂಧುವಾದಲ್ಲಿ, ಸದರಿ ಅಭ್ಯರ್ಥಿಗಳ ಬದಲಿಗೆ ಹೊಸದಾಗಿ ಕೆಳ ಜೇಷ್ಠತೆಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಸದರಿ ಹುದ್ದೆಯ ಆಯ್ಕೆಪಟ್ಟಿಯಿಂದ ಕೈಬಿಡಲಾಗುವುದು".**

3. ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಮೂಲ ದಾಖಲೆಗಳನ್ನು ಸಲ್ಲಿಸದೇ ಇರುವ ಅಭ್ಯರ್ಥಿಗಳನ್ನು ಅವರುಗಳು ಆನ್ ಲೈನ್ ಅರ್ಜಿಯೊಂದಿಗೆ ಅಪ್ ಲೋಡ್ ಮಾಡಿದ್ದ ದಾಖಲೆಗಳನ್ನು ಪರಿಗಣಿಸಿ ಇಲಾಖೆಯವರು ಮೂಲ ದಾಖಲೆಗಳ ನೈಜತೆಯನ್ನು ಪರಿಶೀಲಿಸುವ ಷರತ್ತಿಗೊಳಪಟ್ಟಂತೆ ಆಯ್ಕೆಗೆ ಪರಿಗಣಿಸಲಾಗಿರುತ್ತದೆ. ಅವರು ಆಯ್ಕೆಯಾಗಿರುವ ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು/ಇನ್ನಿತರ ದಾಖಲೆಗಳನ್ನು ನೇಮಕಾತಿ ಪ್ರಾಧಿಕಾರಕ್ಕೆ ಒದಗಿಸಲು ಸಾಧ್ಯವಾಗದಿರುವ ಅಭ್ಯರ್ಥಿಗಳು ಈ ಸಂಬಂಧ ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ ಅಂತಿಮ ಆಯ್ಕೆಪಟ್ಟಿಯಲ್ಲಿ ಸರಿಪಡಿಸಲಾಗುವುದೆಂದು ತಿಳಿಸಿದೆ. ಒಂದು ವೇಳೆ ಸಲ್ಲಿಸಲು ವಿಫಲರಾದಲ್ಲಿ ಅಂತಿಮ ಆಯ್ಕೆಪಟ್ಟಿ ಪ್ರಕಟಗೊಂಡ ನಂತರ ಯಾವುದೇ ರೀತಿಯ ಬದಲಾವಣೆಗೆ ಅವಕಾಶವಿರುವುದಿಲ್ಲವೆಂದು ಈ ಮೂಲಕ ತಿಳಿಸಿದೆ.

**ಈ ಆಯ್ಕೆಪಟ್ಟಿಯು ಮಾನ್ಯ ಉಚ್ಛನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:101942/2023 ಹಾಗೂ KSAT ಅರ್ಜಿ ಸಂಖ್ಯೆ:2351/2023ರ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೊಳಪಟ್ಟಿರುತ್ತದೆ.**

---

ಆಯೋಗದ ಆದೇಶದ ಮೇರೆಗೆ

ಸಹಿ/-

(ಸುರಳ್ಕರ್ ವಿಕಾಸ್ ಕಿಶೋರ್)

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ.